ಓ.ಎಸ್. ನಂಃ 110/2018
ಪಿ.ಡಬ್ಲ್ಯು-4 (ಮಲ್ಲಪ್ಪ)

ದಿನಾಂಕ: 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ. ಬಿ.ಕೆ.ಜೆ. ಪ್ರತಿವಾದಿ 1,2,4 ರಿಂದ 9 ರವರ ಪರ ವಕೀಲರಿಂದಃ**

ಕೌಜಲಗಿ ಗ್ರಾಮದಲ್ಲಿ ನನ್ನ ಜಮೀನುಗಳು ಇರುವುದಿಲ್ಲ ಎಂದರೆ ಸರಿ. ನಾನು ವಿದ್ಯಾಭಾಸ ಮಾಡಿಲ್ಲ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ನಾನು ಸಹಿ ಮಾಡುವುದನ್ನು 10-12 ವರ್ಷಗಳ ಹಿಂದೆ ಕಲಿತಿದ್ದೇನೆ.

2. ವಾದಿಯ ತಾಯಿಯ ಹೆಸರು ನೀಲವ್ವ. ನೀಲವ್ವ ನನ್ನ ಸಂಬಂಧಿಕರಲ್ಲ. 2011 ರಿಂದ ನನಗೆ ಸಿದ್ದಪ್ಪ ರಾಯಪ್ಪ ಡೋಣಿ ಅಂದರೆ 1ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾರೆ. ನನಗು ಮತ್ತು 1ನೇ ಪ್ರತಿವಾದಿಗು ಯಾವುದೇ ವ್ಯವಹಾರ ಆಗಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಹೇಳಿಕೆ ಕೊಡುವುದಕ್ಕಿಂತ ಮೊದಲು ನಾನು ದಾಖಲೆಗಳನ್ನು ನೋಡಿರುತ್ತೇನೆ. ಆ ದಾಖಲೆಗಳ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಯಾವ ದಾಖಲೆಗಳಲ್ಲಿ ಎಷ್ಟು ಹಣ ನಮೂದಿಸಿದ್ದಾರೆ ಎಂದು ನಾನು ನೋಡಿದ್ದೇನೆ.

3. 2011ರಲ್ಲಿ ಮಾತುಕತೆಗೆ ನಮ್ಮ ಮನೆಯಲ್ಲಿ ಸೇರಿದ್ದೆವು ಆದರೆ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ 1 ಹೊಲ ಮಾರುವ ವಿಚಾರವಾಗಿ ನಮ್ಮ ಮನೆಗೆ ಬರುತ್ತೇನೆಂದು ಹೇಳಿದ್ದರು ಯಾವ ದಿನಾಂಕದಂದು ಹೇಳಿದ್ದರು ಎಂದು ನನಗೆ ನೆನಪಿಲ್ಲ. ವಾದಿ ಬಿಲಕುಂದಿಯಲ್ಲಿ ವಾಸ ಇರುತ್ತಾರೆ

ಎಂದರೆ ಸರಿ. ಮಾತುಕತೆಯಾದ ಸಮಯದಲ್ಲಿ ದಾವಾ ಆಸ್ತಿಯ ಉತಾರ ನೋಡಿರುತ್ತೇನೆ. ನಾವು ನೋಡಿದ ಉತಾರದಲ್ಲಿ 1ನೇ ಪ್ರತಿವಾದಿಯ ಹೆಸರು ಇತ್ತು.

4. ದಾವಾ ಆಸ್ತಿ 1ನೇ ಪ್ರತಿವಾದಿಯ ಸ್ವಂತ ಆಸ್ತಿಯೋ ಅಥವಾ ಹಿರಿಯರಿಂದ ಬಂದ ಆಸ್ತಿಯೋ ಎಂದು ನಾನು ವಿಚಾರಿಸಿಲ್ಲ. ದಾವಾ ಅಸ್ತಿಯ ಕುರಿತು ಡೈರಿಗಳನ್ನು ಹಾಗೂ ಉತಾರಗಳನ್ನು ತೆಗೆಯಿಸಿ ನೋಡಿಲ್ಲ. ಮಾತುಕತೆಗೆ ಬೆಳಿಗ್ಗೆ 11-12 ಸುಮಾರಿಗೆ ಸೇರಿದ್ದೆವು.1ನೇ ಪ್ರತಿವಾದಿ ತಮಗೆ ಒಬ್ಬರು ತಂಗಿ ಇದ್ದಾರೆ ಹಾಗೂ 5 ಜನ ಮಕ್ಕಳು ಇದ್ದಾರೆ ಎಂದು ಹೇಳಿರುತ್ತಾರೆ. ಸಿದ್ದಪ್ಪ ಮತ್ತು ಅವರ ತಂಗಿಗೆ ವಾಟ್ನಿ ಆಗಿರುವುದಿಲ್ಲ. ಅದೇ ರೀತಿ ಸಿದ್ದಪ್ಪ ಮತ್ತು ಅವರ ಮಕ್ಕಳ ನಡುವೆ ವಾಟ್ನಿ ಆಗಿರುವುದಿಲ್ಲ. ಬಾಂವಿ ತೆಗೆಯುವುದು ಇದೆ ಹಾಗೂ ತಮ್ಮ ಮನೆತನಕ್ಕೆ ಅಡಚಣೆ ಇದೆ ಎಂದು ಹೇಳಿದ್ದರು. ದಾವಾ ಆಸ್ತಿಯಲ್ಲಿ ಬಾಂವಿ ತೆಗೆಯುವುದು ಇದೆ ಎಂದು ಹೇಳಿದ್ದರು. 1ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ 2014 ರಲ್ಲಿ ಬಾಂವಿ ತೆಗೆದಿರುತ್ತಾರೆ. ಬಾಂವಿ ತೆಗೆಯಲು ಎಷ್ಟು ಖರ್ಚು ಬಂದಿದೆ ಎಂದು ನಾನು ವಿಚಾರಿಸಿಲ್ಲ.

5. ಮಾತುಕತೆ ಆದ ಸಮಯದಲ್ಲಿ ದುಡ್ಡು ಕೊಟ್ಟಿಲ್ಲ. ಹಳ್ಳಿಗಳಲ್ಲಿ ಜಮೀನು ಮಾರಾಟ ಮಾಡುವ ವ್ಯವಹಾರ ಆದಾಗ ಸಂಚಕಾರ ಎಂದು ದುಡ್ಡು ಕೊಡುತ್ತಾರೆ ಆದರೆ ಆ ದಿವಸ ಯಾವುದೇ ದುಡ್ಡು ಕೊಟ್ಟಿಲ್ಲ. ಮಾತುಕತೆ ಆದ ಸಮಯದಲ್ಲಿ ಯಾವ ದಿನಾಂಕದಂದು ದಾಖಲೆ ಬರೆಸಲು ಹೋಗಬೇಕೆಂದು

ಮಾತಾಡಿಲ್ಲ. ವಾದಿಯ ಪರವಾಗಿ ಹಿರಿಯನಾಗಿ ನಾನು ಇದ್ದೆ. ವಾದಿ ಮತ್ತು 1ನೇ ಪ್ರತಿವಾದಿ ಮಾತುಕತೆಯಾದ ಎರಡು ದಿನಗಳ ನಂತರ ಕಾಗದ ಬರೆಯಿಸಲು ಗೋಕಾಕಗೆ ಹೋಗೋಣ ಎಂದು ಹೇಳಿದ್ದರು.

6. ಖರೀದಿ ಕರಾರ ಪತ್ರ ಯಾವ ದಿನಾಂಕದಂದು ಆಗಿದೆ ಎಂದು ನನಗೆ ನೆನಪಿಲ್ಲ. ನಾನು 2014 ಮತ್ತು 2016ರಲ್ಲಿ ಆದ ದಾಖಲೆಗಳು ಬರೆಯುವಾಗ ಮಾತ್ರ ಗೋಕಾಕಗೆ ಬಂದಿರುತ್ತೇನೆ. 2014ರಲ್ಲಿ ಆದ ಕಾಗದ ಬರೆಯುವಾಗ ಸುಮಾರು 11.00 ಗಂಟೆಗೆ ಗೋಕಾಕಗೆ ಬಂದಿದ್ದೆವು. ಸದರಿ ಕಾಗದವನ್ನು ಸ್ವಾಮಿಗಳು ಬರೆದಿರುತ್ತಾರೆ ನನಗೆ ಅವರ ಹೆಸರು ಗೊತ್ತಿಲ್ಲ. 2014ರಲ್ಲಿ ಆದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ವಾದಿ ಹಾಜರಪಡಿಸಿರುತ್ತಾರೆ ನಾನು ಅದನ್ನು ನೋಡಿದ್ದೇನೆ.

7. 2014ರಲ್ಲಿ ನಾನು ಸಹಿ ಮಾಡಿದ ದಾಖಲೆ 06ಎಕರೆ 08ಗುಂಟೆಗೆ ಸಂಬಂಧಪಟ್ಟಿರುತ್ತದೆ. ಸದರಿ ಜಮೀನಿನ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. 2014ರಲ್ಲಿ ಆದ ಕಾಗದವು ರೂ.19,84,000/- ಕ್ಕೆ ಆಗಿತ್ತು. ಸದರಿ ಮೊತ್ತವನ್ನು ದಸ್ತು ಬರಹಗಾರರ ಕಚೇರಿಯಲ್ಲಿ ಕೊಟ್ಟಿರುತ್ತೇವೆ. 2014ರಲ್ಲಿ ಆದ ದಾಖಲೆ ನಾನು ಸಾಕ್ಷಿ ಕೊಡುವ ಪೂರ್ವದಲ್ಲಿ ನೋಡಿದ್ದೇನೆ. ವಾದಿ ರೂ.19,50,000/- ಮೊತ್ತವನ್ನು ಇಂಡಿಯನ್ ಬ್ಯಾಂಕ ಮತ್ತು ಕಾರ್ಪೋರೇಷನ ಬ್ಯಾಂಕನಿಂದ ತೆಗೆದು ಇಟ್ಟುಕೊಂಡಿದ್ದರು ಎಷ್ಟು ದಿನ ಮೊದಲು ತೆಗೆದು ಇಟ್ಟುಕೊಂಡಿದ್ದರು ಎಂದು ನಾನು ಕೇಳಿಲ್ಲ. ಯಾವ ಯಾವ

ದಿನಾಂಕದಂದು ವಾದಿ ಎಷ್ಟು ಎಷ್ಟು ದುಡ್ಡು ತೆಗೆಯಿಸಿದ್ದರು ಎಂದು ನಾನು ಕೇಳಿಲ್ಲ.

8. ಅದೇ ದಿವಸ ಖರೀದಿ ಕರಾ ರಪತ್ರ ಆಗಿರುತ್ತದೆ ಎಷ್ಟು ಸಮಯಕ್ಕೆ ನೋಂದ ಆಗಿದೆ ಎಂದು ನೆನಪಿಲ್ಲ. ನಾನು ನೋಂದಣಿ ಕಚೇರಿಗೆ ಹೋಗಿದ್ದೆನೆ. ನೋಂದಣಿ ಕಚೇರಿಯಲ್ಲಿ ನಾನು ಸಹಿ ಮಾಡಿದ್ದೆನೆ. 2014 ರಲ್ಲಿ ಅದ ದಾಖಲೆ ಪ್ರಕಾರ 02 ವರ್ಷದ ಸಮಯ ಇತ್ತು. 02 ವರ್ಷದೊಳಗೆ ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿ ಮಾಡಿ ಕೊಡುತ್ತೇನೆಂದು ಹೇಳಿದ್ದರು.

9. 2011ರಲ್ಲಿ ಆದ ವ್ಯವಹಾರವು ನನ್ನ ಮನೆಯಲ್ಲಿಯೆ ಆಗಿರುತ್ತದೆ ಆ ವ್ಯವಹಾರ ಆದಾಗ ನಾನು ಹಾಜರ ಇದ್ದೆ. 2011ರಲ್ಲಿ ಯಾವ ದಿನಾಂಕದಂದು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 2011ರಲ್ಲಿ ಆದ ವ್ಯವಹಾರದ ಬಗ್ಗೆಯು ಬರೆಯಿಸಿರುತ್ತೇನೆ. 2011 ಮತ್ತು 2014ರಲ್ಲಿ ಆದ ವ್ಯವಹಾರದಲ್ಲಿ ದಾವಾ ಆಸ್ತಿಯ ಬೆಲೆ ನಿಗಧಿಪಡಿಸಲಾಗಿತ್ತು. 2014ರಲ್ಲಿ ಆದ ಖರೀದಿ ಕರಾರ ಪತ್ರದ ಮೇಲೆ ಖರೀದಿ ಪತ್ರ ಆಗಿಲ್ಲ.

10. 2016ರಲ್ಲಿ ಆದ ವ್ಯವಹಾರದ ಮಾತುಕತೆ ಸ್ವಾಮಿಗಳ ಕಚೇರಿಯಲ್ಲಿ ಆಗಿರುತ್ತದೆ. ನನಗೆ ದಿನಾಂಕ ನೆನಪಿಲ್ಲ. 2011ರಲ್ಲಿ ಆದ ವ್ಯವಹಾರ 06ಎಕರೆ 08ಗುಂಟೆಗೆ ಆಗಿತ್ತು. ಅದಕ್ಕೆ ರೂ.15,00,000/- ಬೆಲೆ ನಿಗಧಿಪಡಿಸಲಾಗಿತ್ತು

ಅದರ ಪೈಕಿ ರೂ.14,00,0000/- ಕೊಟ್ಟಿದ್ದರು. ಸದರಿ ಮೊತ್ತದ ಪೈಕಿ ರೂ.8,50,000/- ಮಹಾದೇವ ಹೊಸತೋಟ ಇವರಿಂದ 1ನೇ ಪ್ರತಿವಾದಿ ಪಡೆದಿದ್ದರು ಹಾಗೂ ಉಳಿದ ಮೊತ್ತ ಮನೆಯಿಂದ ತಂದಿದ್ದರು. ವಾದಿಗು ಮತ್ತು ಮಹಾದೇವ ಹೊಸತೋಟ ಇವರಿಗು ಯಾವುದೇ ಸಂಬಂಧ ಇರುವುದಿಲ್ಲ.

11. ಮಹಾದೇವ ಹೊಸತೋಟ ಇವರ ಕಡೆಯಿಂದ ವಾದಿ ದುಡ್ಡು ಪಡೆದಿದ್ದಕ್ಕೆ ಶಿರಸಂಗಿಯವರ ಕಚೇರಿಯಲ್ಲಿ ಒಂದು ದಾಖಲೆ ಆಗಿರುತ್ತದೆ. ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. ಮಹಾದೇವ ಹೊಸತೋಟ ಇವರಿಗೆ ವಾದಿ ರೂ.8,50,000/- ಪಡೆದು ಬರೆದುಕೊಟ್ಟ ದಾಖಲೆಗೆ ನಾನು ಮತ್ತು ಬಸವರಾಜ ಇಟ್ನಾಳ ಸಾಕ್ಷಿದಾರರಾಗಿ ಸಹಿ ಮಾಡಿದ್ದೆವು. ಸದರಿ ದಾಖಲೆಯಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಮಹಾದೇವ ಹೊಸತೋಟ ಇವರಿಗೆ ಕಬ್ಬಿನ ಬಿಲ್ಲು ಬಂದಿತ್ತು ಅದನ್ನು ಕೊಟ್ಟಿದ್ದರು. 01 ವರ್ಷದಲ್ಲಿ ವಾದಿ ಮಹಾದೇವ ಹೊಸತೋಟ ಇವರಿಗೆ ದುಡ್ಡು ವಾಪಸ್ ಕೊಟ್ಟು ತಾವು ಮಾಡಿಕೊಟ್ಟ ಕಾಗದವನ್ನು ವಾಪಸ್ ಪಡೆದಿರುತ್ತಾರೆ.

12. 2011 ರಿಂದ 2016ರವರೆಗೆ ವಾದಿ ಮತ್ತು 1ನೇ ಪ್ರತಿವಾದಿ ನಡುವೆ ಆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಮಹಾದೇವ ಹೊಸತೋಟ ಇವರ ಕಡೆಯಿಂದ ದುಡ್ಡು ಪಡೆದ ಬಗ್ಗೆ, ಕಾಗದ ಬರೆದುಕೊಟ್ಟ ಬಗ್ಗೆ, ದುಡ್ಡು ವಾಪಸ್ ಕೊಟ್ಟ ಬಗ್ಗೆ, ಕಾಗದ ವಾಪಸ್ ಪಡೆದ ಬಗ್ಗೆ ಬರೆಯಿಸಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ